ಕರ್ನಾಟಕ ಸರ್ಕಾರ
# ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು
ಆರೋಗ್ಯ ಸೌಧ, ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023

ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/41/2020-21 ದಿನಾಂಕ:27.07.2021

31

ಇವರಿಗೆ,

1. ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
2. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಕಛೇರಿ.

ಮಾನ್ಯರೆ,

ವಿಷಯ: ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್-19 ಲಸಿಕಾಕರಣಕ್ಕಾಗಿ ಇ-ವೋಚರ್ ಬಳಕೆ ಕುರಿತು

ಉಲ್ಲೇಖ: ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಪತ್ರ ಸಂಖ್ಯೆ: D.O.No.T-22020/10/2020-imm.(eVouchers) ದಿನಾಂಕ: 13.07.2021

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 08.06.2021 ರ ಕೋವಿಡ್-19 ಲಸಿಕಾ ಕಾರ್ಯಕ್ರಮದ ಪರಿಷ್ಕೃತ ಮಾರ್ಗಸೂಚಿಯಂತೆ ಖಾಸಗಿ ಕೋವಿಡ್ ಲಸಿಕಾಕರಣ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ ವೋಚರ್‌ಗಳನ್ನು ರೆಡೀಮ್ ಮಾಡಬಹುದಾಗಿರುತ್ತದೆ. ಭಾರತ ಸರ್ಕಾರದ ಆರ್ಥಿಕ ಸೇವೆಗಳ ಇಲಾಖೆಯು ಎಲೆಕ್ಟ್ರಾನಿಕ್ ವೋಚರ್‌ಗಳ ನೀಡಿಕೆ ಮತ್ತು ರೆಡೆಂಪ್ಷನ್ ಕ್ರಿಯೆಗಾಗಿ ವ್ಯವಸ್ಥೆಯನ್ನು ಸಿದ್ಧಪಡಿಸಿರುತ್ತದೆ. ಸದರಿ ಕಾರ್ಯಯೋಜನೆಯಡಿ ಪ್ರಾಯೋಜಕರು ನಿಗಧಿತ 8 acquiring/aggregator bank ಗಳೊಂದಿಗೆ ಕೈಜೋಡಿಸಿ UPI Prepaid Voucher ಗಳನ್ನು ತಮ್ಮ ಆಯ್ದ ಫಲಾನುಭವಿಗಳಿಗೆ ಕೋವಿಡ್ ಲಸಿಕಾಕರಣಕ್ಕಾಗಿ ನೀಡಬಹುದಾಗಿರುತ್ತದೆ. ಸದರಿ ಸ್ಕೀಮ್‌ನಲ್ಲಿ ಭಾಗವಹಿಸುವ ಖಾಸಗಿ ಕೋವಿಡ್ ಲಸಿಕಾಕರಣ ಕೇಂದ್ರಗಳಲ್ಲಿ ಇ-ವೋಚರ್‌ಗಳನ್ನು ರೆಡೀಮ್ ಮಾಡಿಕೊಂಡು ಲಸಿಕೆ ಪಡೆಯಬಹುದಾಗಿರುತ್ತದೆ. The National payment corporation of India (NPCI) ವು ಈ ಉಪಕ್ರಮದ ನೋಡಲ್ ಏಜೆನ್ಸಿಯಾಗಿರುತ್ತದೆ.

UPI Prepaid Voucher ಗಳನ್ನು ಕಾರ್ಪೋರೇಟ್ ಕಂಪನಿ / ಉದ್ದಿಮೆದಾರರು ಪುರಸ್ಕರಿಸಿದಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಕೋವಿಡ್-19 ಲಸಿಕಾಕರಣ ಸೇವೆಗಳನ್ನು ಪಡೆಯಲು ಸಹಾಯಕಾರಿಯಾಗಲಿದೆ ಹಾಗೂ ಲಸಿಕಾಕರಣದ ವೇಗವನ್ನು ವೃದ್ಧಿಸಲಿದೆ. ಆದ್ದರಿಂದ ತಾವುಗಳು ಈ ಪ್ರಕ್ರಿಯೆಯ ಉಸ್ತುವಾರಿ ವಹಿಸಿ ಕಾರ್ಪೋರೇಟ್ ಕಂಪನಿ / ಉದ್ದಿಮೆದಾರರ ಸಭೆ ಕರೆದು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಮನವೊಲಿಸಿ ವೋಚರ್‌ಗಳ ನೀಡಿಕೆ, ಖಾಸಗಿ ಕೋವಿಡ್-19 ಲಸಿಕಾಕರಣ ಕೇಂದ್ರಗಳನ್ನು on board ಮಾಡಿಸಲು ಅವಶ್ಯ ಕ್ರಮಕ್ಕೈಗೊಳ್ಳಲು ಕೋರಲಾಗಿದೆ.

ಇದರೊಂದಿಗೆ ಕೋವಿಡ್ ಲಸಿಕಾಕರಣಕ್ಕಾಗಿ UPI Prepaid Voucher ಗಳ ಕುರಿತ ಮಾಹಿತಿ ಹಾಗೂ acquiring/aggregator bank ಗಳ ಪಟ್ಟಿ ಮತ್ತು ತಾವು ಕೈಗೊಳ್ಳಬೇಕಾದ ಕ್ರಮಗಳು ಸಂಪೂರ್ಣ ಮಾಹಿತಿಯನ್ನು ಲಗತ್ತಿಸಿ ಕಳುಹಿಸಲಾಗಿದೆ.

ಅರುಂಧತಿ

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಅಧಿಕಾರಿಗಳು.
2. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ.

3. ಎಲ್ಲಾ ಜಿಲ್ಲೆಯ ಆರ್.ಸಿ.ಹೆಚ್ ಅಧಿಕಾರಿಗಳು,
4. ಲಸಿಕಾಧಿಕಾರಿಗಳು (ಬಿ.ಬಿ.ಎಂ.ಪಿ)

**ಮಾಹಿತಿಗಾಗಿ:**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ವಿಶೇಷ ಆಯುಕ್ತರು (ಆರೋಗ್ಯ), ಬಿಬಿಎಂಪಿ.
5. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
9. ಉಪ ನಿರ್ದೇಶಕರು (ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
10. ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
11. ಕಛೇರಿ ಪ್ರತಿ